# ಕಳ್ಳಿಸಾಲ ಹೂವು

**ಸಂತೆಬೆನ್ನೂರು ಫೈಜ್ನಟ್ರಾಜ್**

ಕಲೆ: ವೆಂಕಟ್ರಮಣ ಭಟ್

ಕೆಂಚೇರಪ್ಪ ಅದೆಷ್ಟು ಬೀಡಿ ಸೇದಿ ಕೆಡಿಸಿದನೋ ಜೇಬಲ್ಲಿದ್ದ ಕಟ್ಟು ಖಾಲಿಯಾದ ಮೇಲೆಯೇ ಹೊಲದ ಬದು ಮೇಲಿಂದ ಎದ್ದಿದ್ದು! ಆದದ್ದು ಆಗಿ ಹೋತು, ಆಗೋದ್ ತಾನೇ ನೋಡಬೇಕು. ಎದ್ದ್ಯಾಗ್ ಬಿದ್ದ ಇಸಾನೇ ಎದ್ದು ಬಿದ್ದು ಹೋಗುತ್ತೆ ಕಣ್ಣಿಗ್ ಬಿದ್ದ ಅನಿಷ್ಟ ಎದ್ದ್ಯಾಗ್ಯಾಕ್ ತಂದ್ಕನನ? ಜೀವನದ ಗಾಡಿ ಪದ್ದಪ್ಪನ ಮಾಳ ತಂಕ ಎಳದೀನಿ; ಮಸಣತಂಕ ಎಳದು ಬಿಸಾಟಿದ್ರಾತು! ಮನೆ ಮರ್ವಾದೆ, ಎದೆ ದುಕ್ಕ ಹೇಳ್ದಷ್ಟು ಹೆಚ್ಚೆ! ಅಮಿಕ್ಕಂಡ್ ಸಾಗಿದ್ರೇ ಯಾವನಿಗ್ ಏನ್ ಗೊತ್ತಾಕ್ಕತ್ತೆ? ಹೆಗಲ ಟವಲ್ ತೆಗೆದು ಅಂಡಿಗಿದ್ದ ಹುಲ್ಕಸ ಕೊಡವಿ ಮನೆ ದಾರಿ ಹಿಡಿದು ಹೊಂಟ! ಕೆಂಚೇರಪ್ಪ ಮನಿಗ್ ಬಂದಿದ್ದೇ ತಡ, ಅದರ ತಲೆ ಮೇಲೆ ಟಚ್‌ಸ್ಕ್ರೀನ್ ಫೋನ್ ಇತ್ತು. ಸರಕ್ಕನೇ ಎಳೆದು ಪಂಚೆ ಎತ್ತಿ ನಿಕ್ಕರ್ ಜೇಬಿನೊಳಕ್ಕಿಟ್ಟು ಸೈಕಲ್ ಹತ್ತಿ ಸಂತೋಷಪುರದ ದಾರಿ ಹಿಡಿದ, ಹೊಲಕ್ ಹೋಗೋ ನೆಪ ಹೇಳಿ ಊರು ಸಿಗೋತನಕ ಪೆಡಲ್ ತುಳಿದ.

ಸೀದಾ ಬಂದು 'ಗ್ಯಾಲಕ್ಸಿ ಮೊಬೈಲ್ ಸೆಂಟರ್' ಮುಂದೆ ನಿಂತು ಸೈಕಲ್ ನಿಲ್ಲಿಸುವಷ್ಟರಲ್ಲಿ ಬೆವರು ಕಪಾಳದಿಂದ ಎದೆಗೆ ಧುಮುಕುತ್ತಿತ್ತು. ನಿಕ್ಕರ್ ಜೇಬಿಂದ ಮೊಬೈಲ್ ತೆಗೆದು ಅಂಗಡಿಯವನ ಮುಂದೆ ಇಟ್ಟು ಮಕ ನೋಡಿದ. ಏನೆಂಬಂತೆ ಕಣ್ಣಲ್ಲೇ ಕೇಳಿದ ಅವನಿಗೆ ಕೆಂಚೇರಪ್ಪ ಮತ್ತೆ ಮಕ ನೋಡಿದ. ಏನೆಂದು ಹೇಳಬೇಕು ಅಂತ ಗೊತ್ತಾಗದೇ ಒಂದು ಕ್ಷಣ ಸುಮ್ಮನಾದ! ಅಂಗಡಿ ಹುಡುಗ ಮೊಬೈಲ್ ಕೈಲಿ ಹಿಡಿದು, 'ಏನ್ ಮಾಡಬೇಕಣ್ಣ, ರೀಚಾರ್ಜಾ? ರಿಪೇರಿನ? ಗ್ಲಾಸ್ ಹಾಕಬೇಕ? ಅಂದ. ಕೆಂಚೇರಪ್ಪ ಮತ್ತೆ ಮಕ ನೋಡಿದ. ಏನೆಂದು ಹೇಳಲಿ? ಅದರೊಳಗಿರೋ ಅನಿಷ್ಟ ತೆಗೆದು ಕೊಡು ಅನ್ನಲಾ? ಬೆತ್ತಲೆ ಚಿತ್ರ ಅಳಿಸು ಅನ್ನಲಾ? ಎಂತೆಂಥದೋ ಮಾತುಗಳು ಇವೆ ತಗಿ ಅನ್ನಲಾ? ಬಿತ್ತಿದ ಹೊಲ ಹಸನಾಗಿ ಫಸಲು ಇನ್ನೇನು ಕೈಗೆ ಬಂತು ಅನ್ನುವಾಗ ಬೆಂಕಿ ಬಿದ್ದಂತಹ ಅನುಭವವಾಗಿ ಬಾಯಿ ಕಟ್ಟಿ ಸುಮ್ಮನಾಗಿಬಿಟ್ಟ! ಅಯ್ಯೋ ಮೂಕ ಇರಬೇಕೆಂದು ಅಂಗಡಿಯವ ಸನ್ನೆ ಮಾಡಿ ಭುಜ ಅಲುಗಿಸಿ ಮತ್ತೆ ಕೇಳಿದ.

ಧೈರ್ಯ ತಗಂಡ ಕೆಂಚೇರಪ್ಪ, 'ಅಲ್ಲಾ, ಅದು ಫೋಟ ಜಾಸ್ತಿ ಅವೆ ಖಾಲಿ ಮಾಡಿ ಕೊಡಪ್ಪ' ಅಂದ. ಅಯ್ಯೋ ಇಷ್ಟಕ್ಕೆ ಅಷ್ಟು ಯೋಚನೆ ಮಾಡಿದ್ಯ, ಅಂತ ಮೊಬೈಲ್ ಆಪರೇಟ್ ಮಾಡಿದರೆ ಲಾಕಾಗಿತ್ತು. ಪ್ಯಾಟರ್ನ್ ಹೇಳು, ಬೇಗ ಮಾಡಿಕೊಡ್ತೀನಂದ. ಅಂಗಡಿಯವನ ಮಾತಿಗೆ ಕೆಂಚೇರಪ್ಪಂಗೆ ಒಂದೂ ತಿಳೀಲಿಲ್ಲ. ಉಸಿರು ಸಿಕ್ಕಂಡಂಗೆ ನೋಡಿದಾಗ ಅಂಗಡಿಯವ ಇದಕ್ಕೆ ಬೀಗ ಹಾಕಿದರೆ ತಕ್ಕಂಡ್ ಬಾ ಅಂತ ಸೆಲ್ ಕುಕ್ಕಿ ಬೇರೆ ಕೆಲಸದ ಕಡೆ ಗಮನಹರಿಸಿದ. ಅಯ್ಯೋ ಇದರ ಮಕ ಸುಡ... ಇದಕ್ಕೂ ಬೀಗನ? ಜೀವನದ ಎಷ್ಟೋ ರಹಸ್ಯಗಳಿಗೆ ಬೀಗ ಬಿದ್ದವೆ; ಹಂಗೂ ನನ್ ಬಾಳಿನ ರಹಸ್ಯಕ್ಕೂ ಬೀಳಬಾರದಿತ್ತೇ? ಏನು ಮಾಡನ ಅಂತ ತಲೆ ಕೆರೆದರೂ ಕೆಂಚೇರಪ್ಪನಿಗೇನೂ ತಿಳಿಲಿಲ್ಲ.